ಶ್ರೀ ಎಸ್. ಆರ್. ಷಣ್ಮುಗಂ.—ಸ್ವಾಮಿ, ಕೋಲಾರ ಚಿನ್ನದ ಗಣಿಯಲ್ಲಿ ಮೊದಲು 28 ಸಾವಿರ ಲೇಬರರ್ಸ್ ಕೆಲಸ ಮಾಡಿಕೊಂಡಿದ್ದರು. ಈಗ ಅದೇ ಮೈನಿಂಗ್‌ನಲ್ಲಿ 12 ಸಾವಿರ ವರ್ಕರ್ಸ್ ಕೆಲಸ ಮಾಡುತ್ತಿದ್ದಾರೆ. ಇದರ ದೆಸೆಯಿಂದಾಗಿ 2 ಲಕ್ಷ ಜನ ಸಂಸಾರ ತೊಂದರೆಯಲ್ಲಿದ್ದಾರೆ. ಈ ರೀತಿ ಅನ್‌ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್ಸ್ ಜಾಸ್ತಿಯಾಗಿರುವುದರಿಂದ ಅಲ್ಲಿಯ ನಿರುದ್ಯೋಗಿಗಳಿಗೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಾದರೂ ಹೊಸ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ ಉದ್ಯೋಗವನ್ನು ದೊರಕಿಸಿಕೊಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಎಂ. ರಾಜಶೇಖರಮೂರ್ತಿ.—ಖಾಸಗಿಯವರು ಯಾರಾದರೂ ಇಂಡಸ್ಟ್ರೀಯನ್ನು ಶುರು ಮಾಡುತ್ತೇವೆ ಎಂದು ಮುಂದೆ ಬಂದರೆ ಅವರಿಗೆ ಸರ್ಕಾರದಿಂದ ಏನು ಸೌಲಭ್ಯಗಳು ಬೇಕೋ ಅದನ್ನು ಪರಿಶೀಲನೆ ಮಾಡಬಹುದು.

ಶ್ರೀ ಇ. ನಾರಾಯಣಗೌಡ.—ಈಗ ರಾಜ್ಯ ಸರ್ಕಾರದಲ್ಲಿ ಸ್ಥಾಪನೆ ಆಗಿರುವ ಭಾರತ್ ಅರ್ತ್ ಮೂವರ್ಸ್ ಇಂಡಸ್ಟ್ರಿ ಏನು ಇದೆಯೋ ಅದರಿಂದ ಮೈಸೂರಿನವರಿಗೆ ಹೆಚ್ಚಿನ ಪ್ರಯೋಜನ ಏನೂ ಆಗುತ್ತಿಲ್ಲ. ಮದ್ರಾಸ್, ಕೇರಳ ಹೀಗೆ ಹೊರಗಡೆಯಿಂದ ಲೇಬರರ್ಸ್‌ನ್ನು ತೆಗೆದುಕೊಳ್ಳುತ್ತಿದ್ದಾರೆ. ಈ ದೃಷ್ಟಿಯಿಂದ ಮೈಸೂರಿನ ಒಬ್ಬ ಐ.ಎ.ಎಸ್. ಅಧಿಕಾರಿಯನ್ನು ನೇಮಿಸಿದರೆ ಆಗ ನಮ್ಮವರಿಗೆ ಅನುಕೂಲವಾಗುತ್ತದೆ. ಆದ್ದರಿಂದ ಭಾರತ ಸರ್ಕಾರಕ್ಕೆ ಇದರ ಬಗ್ಗೆ ಒತ್ತಾಯಪೂರ್ವಕವಾಗಿ ತಿಳುವಳಿಕೆ ಕೊಡುತ್ತೀರಾ ?

ಶ್ರೀ ಎಂ. ರಾಜಶೇಖರಮೂರ್ತಿ.—ಇದುವರೆಗೆ ಅಲ್ಲಿ ನಮ್ಮವರೇ ಆದ ಐ.ಎ.ಎಸ್. ಅಧಿಕಾರಿ ಇದ್ದರು. ಭಾರತ ಸರ್ಕಾರದವರ ಅಭಿಪ್ರಾಯವೂ ಕೂಡ ಮೈಸೂರಿನವರಿಗೇ ಕೊಡಬೇಕು ಎಂದು ಇದೆ. ಮತ್ತೆ ಇದರ ಬಗ್ಗೆ ಭಾರತ ಸರ್ಕಾರಕ್ಕೆ ಬರೆದಿದ್ದೇವೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಭಾರತ್ ಅರ್ತ್ ಮೂವರ್ಸ್ ಸ್ಟಾರ್ಟ್ ಆದದ್ದು ಅಲ್ಲಿಯ ಸರ್‌ಪ್ಲಸ್ ಲೇಬರಿಗೆ ಕೆಲಸಗಳನ್ನು ಕೊಡಬೇಕು ಎಂದು. ಈಗ ಬೇರೆಯವರನ್ನು ತೆಗೆದುಕೊಳ್ಳುತ್ತಿದ್ದಾರೆ. ಇದನ್ನು ಸುಧಾರಿಸಲಿಕ್ಕೆ ಆಗುವುದಿಲ್ಲವೇ ?

ಶ್ರೀ ಎಂ. ರಾಜಶೇಖರಮೂರ್ತಿ.—ಕೇಂದ್ರ ಸರ್ಕಾರದ ಅಭಿಪ್ರಾಯ ಏನು ಇದೆಯೋ, ನಮ್ಮ ಅಭಿಪ್ರಾಯವೂ ಅದೇ ರೀತಿ ಇದೆ. ಸರ್‌ಪ್ಲಸ್ ಲೇಬರರ್ಸ್ ಇದ್ದುದೇ ಯಾರು ಯಾರು ಮೆಡಿಕಲೀ ಫಿಟ್ ಆಗಿರುತ್ತಾರೋ ಅಂಥವರನ್ನು ಅಬ್ಸಾರ್ಬ್ ಮಾಡಬೇಕು ಎನ್ನುವ ಅಭಿಪ್ರಾಯ.

Death of Children due to Food poisoning in Kengeri

510. Sri B. B. SAYANAK (Belgaum).—

Will the Chief Minister be pleased to state :—

(*a*) whether two children died of food poisoning at their home in Adi-Karnatak Colony, Kengeri on 2nd August 1969 ;

(*b*) the number of persons of the same family that were admitted in the Victoria Hospital in a critical condition ;

(*c*) whether it is a fact that the food poisoning has occurred after they consumed the rice purchased from the Ration Shop ?

Sri VEERENDRA PATIL (Chief Minister).—

(*a*) Yes. Two Children were found dead after taking their food

(*b*) Six.

(*c*) The matter is under investigation.

Sri B. B. SAYANAK.—May I know out of the six persons admitted into the Victoria Hospital, how many survived and how many died ?

† Sri VEERENDRA PATIL.—Two children died immediately in the house. I think one person by name Eramma died in the hospital and others are undergoing treatment.

Sri B. B. SAYANAK.—May I know within how many months the investigation will be over ?

Sri VEERENDRA PATIL.—The investigation is going on. This event occurred on 2nd August 1969 and it is difficult for me to say within how much time the investigation will be over.

ಶ್ರೀ ವಾಟಾಳ್ ನಾಗರಾಜ.—ಸ್ವಾಮಿ, ಈಗ ಸತ್ತಿರತಕ್ಕಂಥ ಸಂಸಾರಕ್ಕೆ ಯಾವುದಾದರೂ ಪರಿಹಾರವನ್ನು ಕೊಡಲು ಸರ್ಕಾರ ಆಲೋಚನೆ ಮಾಡಿದೆಯೇ ?

ಶ್ರೀ ವೀರೇಂದ್ರಪಾಟೀಲ್.—ಅದರ ಪ್ರಪೋಸರ್ಸ್ ಇದುವರೆಗೆ ಏನೂ ಬಂದಿಲ್ಲ. ಇದಕ್ಕೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಹೇಳುತ್ತೇನೆ.

Sri G. CHANDRAKANT.—May I know how many food poisonin cases have occurred other than this ?

Sri VEERENDRA PATIL.—How can I say the number of other food poisoning cases in the State ?

ಶ್ರೀ ಬೋಳಾ ರಘುರಾಮಶೆಟ್ಟಿ.—ಸಂಬಂಧಪಟ್ಟ ರೇಷನ್ ಅಂಗಡಿಯಿಂದ ಉಳಿದ ಅಕ್ಕಿಯನ್ನು ಸೀಸ್ ಮಾಡಲಾಗಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ರೇಷನ್ ಷಾಪಿನಿಂದ ತಂದಿರುವ ವಿಚಾರ ಗೊತ್ತಿಲ್ಲ. ಈರಮ್ಮ ಎಂಬ ಮುದುಕಿ ಹೇಟೆಗೆ ಹೋಗಿ ಹಿಟ್ಟು, ಕಾಯಿಪಲ್ಯ ತಂದು ಅಡಿಗೆ ಮಾಡಿ ಎಲ್ಲರಿಗೂ ಬಡಿಸಿದ್ದಾಳೆ. ಅದನ್ನು ತಿಂದು ಎರಡು ಹುಡುಗರು ಮತ್ತು ಆ ಮುದುಕಿ ಸತ್ತರು. ಮುದುಕಿ ಸತ್ತಿರುವುದರಿಂದ ಎಲ್ಲಿಂದ ಪದಾರ್ಥಗಳನ್ನು ತಂದಳು ಎಂದು ಹೇಳುವುದು ಕಷ್ಟವಾಗಿದೆ. ಅದಕ್ಕಾಗಿಯೇ ಇನ್‌ವೆಸ್ಟಿಗೇಷನ್ ನಡೆಯುತ್ತಿದೆ. ಅಲ್ಲದೆ ಅಡಿಗೆ ಮಾಡಿದ ಗಡಿಗೆ ಮತ್ತು ಮಕ್ಕಳು ಏನು ಊಟ ಮಾಡಿದ್ದರೋ ಅದನ್ನೂ ಕೂಡ ಕೆಮಿಕಲ್ ಎಗ್ಜಾಮಿನರ್‌ಗೆ ಕಳಿಸಿಕೊಟ್ಟಿದ್ದಾರೆ. ಅವರಿಂದ ಸರ್ಕಾರಕ್ಕೆ ಇನ್ನೂ ವರದಿ ಬಂದಿಲ್ಲ.

ಶ್ರೀ ಎಂ. ನಾಗಪ್ಪ.—ಕೆಮಿಕಲ್ ಎಗ್ಜಾಮಿನರ್ ರಿಪೋರ್ಟ್ ಬರುವುದಕ್ಕೆ ಮುಂಚೆ ವಿಷ ಮಿಶ್ರಿತವಾದ ಆಹಾರವನ್ನು ಸೇವಿಸಿದವರನ್ನು ಪರೀಕ್ಷೆ ಮಾಡಿದ ಡಾಕ್ಟರು ಯಾವ ತರಹ ವಿಷ ಎನ್ನುವ ಅಭಿಪ್ರಾಯವನ್ನು ಕೊಟ್ಟಿದ್ದಾರೆಯೇ ಸ್ವಾಮಿ ?

ಶ್ರೀ ವೀರೇಂದ್ರ ಪಾಟೀಲ್.—ಕೆಮಿಕಲ್ ಎಗ್ಜಾಮಿನೇಷನ್ ಆದ ತರುವಾಯ ಅವರಿಂದ ರಿಪೋರ್ಟ್ ತರಿಸಬೇಕಾಗುತ್ತದೆ. ನಾನು ಆಗಲೇ ಹೇಳಿದಂತೆ ತಜ್ಞರ ಅಭಿಪ್ರಾಯಕ್ಕಾಗಿ ಕೆಮಿಕಲ್ ಎಗ್ಜಾಮಿನರ್‌ಗೆ ಅಡಿಗೆ ಮಾಡಿದ ಗಡಿಗೆ ಮುಂತಾದುವನ್ನು ಕಳಿಸಲಾಗಿದೆ. ಅವರಿಂದ ರಿಪೋರ್ಟ್ ಬರುವುದಕ್ಕೆ ಮುಂಚೆ ಅಭಿಪ್ರಾಯ ಕೊಟ್ಟರೆ ಅದು ಒಪ್ಪತಕ್ಕ ಅಭಿಪ್ರಾಯವಾಗುವುದಿಲ್ಲ.

Sri V. N. PATIL.—There is a specific question whether rice was purchased from ration shops. Shall we take it that rice was purchased from the ration shop and Government has not taken steps to seize the shop ?

Sri VEERENDRA PATIL.—I have replied the question. I said that the old lady had gone to bazaar and purchased flour and vegetables and not rice. The source from which she purchased is still under investigation because the lady who purchased is no more to give evidence. It is for the officers to find out whether it is possible to collect evidence, as to the place from where these articles were purchased.